**ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ತೆಲಗು ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆ ಬರುವುದಿಲ್ಲ ಎಂದು ತಿಳಿಸಿದ ಮೇರೆಗೆ ಶ್ರೀ ಬಿ.ಎ ವಕೀಲರನ್ನು ತರ್ಜುಮೆಗಾರರನ್ನಾ ಗಿ ನೇಮಿಸಿಕೊಳ್ಳಲು ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ದಾಖಲಾತಿಗಳಲ್ಲಿ ನನ್ನ ಮಗ ಹೆಲ್ಮೆಟ್ ಧರಿಸಿದ್ದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು ಸೂಕ್ತ ಉತ್ತರ ನೀಡಿರುವುದಿಲ್ಲ. ನನ್ನ ಮಗನಿಗೆ ಚಾಲನಾ ಪರವಾನಗಿ ಇತ್ತೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ದಿನ ನನ್ನ ಮಗ ಹೋಗುತ್ತಿದ್ದ ದ್ವಿಚಕ್ರ ವಾಹನ ನನ್ನ ಮಗನಿಗೆ ಸೇರಿತ್ತು. ಸದರಿ ವಾಹನಕ್ಕೆ ವಿಮೆ ಇತ್ತೋ, ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮಗ ಪರವಾನಗಿ ಇಲ್ಲದೇ, ವಿಮೆ ಇಲ್ಲದ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿದ್ದು, ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಗನೇ ಆಪಾದಿತ ಕಾರಿಗೆ ಡಿಕ್ಕಿಪಡಿಸಿಕೊಂಡು ಅಪಘಾತವನ್ನುಂಟು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ಕಾರಿನ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸ್ ದಾಖಲಾತಿಗಳನ್ನು ನಾನು ಹಾಜರುಪಡಿಸದೇ ಪೊಲೀಸರಿಗೆ ಸಮನ್ಸ್ ನೀಡಿ ಸದರಿ ದಾಖಲಾತಿಗಳನ್ನು ತಂದು ಹಾಜರುಪಡಿಸುವಂತೆ ಮಾಡಿದ್ದು, ಅವರೊಂದಿಗೆ ಶಾಮೀಲಾಗಿ ಆಪಾದಿತ ಕಾರಿನ ಚಾಲನಾ ಪರವಾನಗಿಯನ್ನೂ ಸಹ ಸೃಷ್ಟಿಸಿ ಹಾಜರುಪಡಿಸಿರತ್ತೇನೆ ಎಂದರೆ

ಸರಿಯಲ್ಲ. ಆಪಾದಿತ ಕಾರಿನ ಚಾಲಕನಿಗೆ ಪರವಾನಗಿ ಇಲ್ಲದೇ ಇದ್ದರೂ ಸಹ ಪೊಲೀಸರೊಂದಿಗೆ ಶಾಮೀಲಾಗಿ ಸಂಬಂಧಪಟ್ಟ ಕಲಂ ಗಳನ್ನು ಅಳವಡಿಸದಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನಿಗೆ ಪರವಾನಗಿ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ.

ಅಪಘಾತವಾದ ಸಮಯದಲ್ಲಿ ನನ್ನ ಮಗನಿಗೆ 36ಕ್ಕಿಂತಲೂ ಹೆಚ್ಚಿ ನ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ದೂರನ್ನು ನೀಡಿದ ಸಿದ್ದಮ್ಮ ನನ್ನ ಪತ್ನಿಯಾಗಿದ್ದು, ಅವರನ್ನು ಪಕ್ಷಕಾರರನ್ನಾ ಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಅವಿವಾಹಿತನಾಗಿದ್ದನು. ನನ್ನ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವನಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಕೆಲಸ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನ್ನ ಮಗನ ಅಂತ್ಯ ಸಂಸ್ಕಾರ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಪ್ರತ್ಯೇಕ ಜಮೀನು ಇಲ್ಲ, ಒಟ್ಟು ಕುಟುಂಬದ ಹೆಸರಿನಲ್ಲಿ ಇದೆ. ನನಗೆ ಸುಮಾರು 3 ಎಕರೆ ಬರಬಹುದು. ಸದರಿ ಜಮೀನಿನಲ್ಲಿ ಮನೆಗಾಲದಲ್ಲಿ ಜೋಳ ಬೆಳೆಯುತ್ತೇವೆ, ಉಳಿದಂತೆ ಏನೂ ಬೆಳೆ ಬೆಳೆಯುವುದಿಲ್ಲ. ಸರ್ಕಾರದ ಮೂಲಕ ನನಗೆ ರೂ.4,000/- ಪಿಂಚಣಿ ಬರುತ್ತದೆ. ಸರ್ಕಾರದಿಂದ ನಮಗೆ ಪಡಿತರ ಸಾಮಾಗ್ರಿಗಳು ಬರುತ್ತದೆ. ನಾವು ನನ್ನ ಮಗನ ಆದಾಯವನ್ನು ಅವಲಂಬಿಸಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತೊಬ್ಬ ಮಗ ಓದುವಾಗಲೇ ಮನೆ ಬಿಟ್ಟು ಹೋಗಿದ್ದು, ಆತನ ಬಗ್ಗೆ ನನಗೆ ಯಾವುದೇ ಮಾಹಿತಿ ತಿಳಿದಿಲ್ಲ. ಆತನನ್ನು ಪತ್ತೆ ಮಾಡಲು ಪ್ರಯತ್ನ ಮಾಡಿದ್ದು, ಆದರೆ ದೊರಕಿರುವುದಿಲ್ಲ. ನನ್ನ ಮಗನಿಗೆ ಮತ್ತು ಆಪಾದಿತ ಕಾರಿನ ಚಾಲಕನಿಗೆ ಪರವಾನಗಿ ಇಲ್ಲದೇ ಇದ್ದರೂ ಸಹ 2ನೇ ಎದುರುದಾರರಿಂದ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**